# ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಹಾಗೂ
# ಸಾಹಿತ್ಯ ಅಕಾಡೆಮಿ, ನವದೆಹಲಿ



ಡಾ. ಸಿದ್ದಯ್ಯ ಪುರಾಣಿಕ



ಶ್ರೀ ಮಿರ್ಜಿ ಅಣ್ಣಾರಾಯ



ಡಾ. ರಾ.ಯ. ಧಾರವಾಡಕರ

## ಡಾ. ಸಿದ್ದಯ್ಯ ಪುರಾಣಿಕ(ಕಾವ್ಯಾನಂದ)
## ಶ್ರೀ ಮಿರ್ಜಿ ಅಣ್ಣಾರಾಯ ಹಾಗೂ
## ಡಾ. ರಾ.ಯ. ಧಾರವಾಡಕರ ಅವರುಗಳ
## ಜನ್ಮಶತಮಾನೋತ್ಸವ ಸಮಾರಂಭ

---

೩೧ ಜುಲೈ ಹಾಗೂ ೧ ಆಗಸ್ಟ್, ೨೦೧೯

---

ಸ್ಥಳ : ಶ್ರೀಕೃಷ್ಣರಾಜ ಪರಿಷನ್ಮಂದಿರ

ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮

**ತಮಗೆ ಆತ್ಮೀಯ ಸ್ವಾಗತ**

ಡಾ. ರಾಜಶೇಖರ ಹತಗುಂದಿ
ಗೌರವ ಕಾರ್ಯದರ್ಶಿ, ಕ.ಸಾ.ಪ.

ವ.ಚ. ಚನ್ನೇಗೌಡ
ಗೌರವ ಕಾರ್ಯದರ್ಶಿ, ಕ.ಸಾ.ಪ.

ಪಿ. ಮಲ್ಲಿಕಾರ್ಜುನಪ್ಪ
ಗೌರವ ಕೋಶಾಧ್ಯಕ್ಷರು, ಕ.ಸಾ.ಪ.

ಡಾ. ಪದ್ಮರಾಜ ದಂಡಾವತಿ
ರಾಜ್ಯ ಸಂಚಾಲಕರು, ಕ.ಸಾ.ಪ.

ಎಸ್.ಪಿ. ಮಹಾಲಿಂಗೇಶ್ವರ್
ಪ್ರಾದೇಶಿಕ ಕಾರ್ಯದರ್ಶಿ, ಕೇಂದ್ರ ಸಾಹಿತ್ಯ ಅಕಾಡೆಮಿ

# ಡಾ. ಸಿದ್ದಯ್ಯ ಪುರಾಣಿಕ

'ಕಾವ್ಯಾನಂದ' ಕಾವ್ಯನಾಮದಿಂದ ಪ್ರಸಿದ್ಧರಾದ ಡಾ. ಸಿದ್ದಯ್ಯ ಪುರಾಣಿಕರು ಹುಟ್ಟಿದ್ದು ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲ್ಲೂಕಿನ ದ್ಯಾಂಪುರ ಎಂಬ ಹಳ್ಳಿಯಲ್ಲಿ ೧೯೧೮ ರ ಜೂನ್ ೧೮ ರಂದು. ಪ್ರಾಥಮಿಕ ಶಿಕ್ಷಣ ಗಾಂವಠಿ ಹಾಗೂ ಚಿಕ್ಕೇನಕೊಪ್ಪ ಶಾಲೆಯಲ್ಲಿ. ಕಲಬುರ್ಗಿಯ ಸರಕಾರಿ ಹೈಸ್ಕೂಲಿನಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸದ ನಂತರ ಬಿ.ಎ. ಪದವಿಯನ್ನು ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಪಡೆದರು. ತಂದೆಯವರು ಪುರಾಣಿಕರಿಗೆ ಸಾಹಿತ್ಯ, ವ್ಯಾಕರಣ, ಅದರಲ್ಲೂ ಹಳಗನ್ನಡ ಸಾಹಿತ್ಯದಲ್ಲಿ ಹೆಚ್ಚು ಆಸಕ್ತಿ ಬರಲು ಉತ್ತೇಜನ ನೀಡಿದರು. ಸಿದ್ದಯ್ಯ ಪುರಾಣಿಕರು ತಹಸೀಲ್ದಾರರಾಗಿ ತಮ್ಮ ಉದ್ಯೋಗವನ್ನು ಪ್ರಾರಂಭಿಸಿ ಮುಂದೆ ಹಲವಾರು ಇಲಾಖೆಗಳಲ್ಲಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿ ಒಳ್ಳೆಯ ಆಡಳಿತಗಾರರೆಂದು ಹೆಸರು ಪಡೆದರು. ಕನ್ನಡ, ಹಿಂದಿ, ಉರ್ದು, ಸಂಸ್ಕೃತ, ಇಂಗ್ಲಿಷ್ ಭಾಷೆಗಳ ಸಾಹಿತ್ಯವನ್ನೂ ಆಳವಾಗಿ ಅಧ್ಯಯನ ಮಾಡಿದ ಕಾವ್ಯಾನಂದರು ಕನ್ನಡ, ಇಂಗ್ಲಿಷ್ ಎರಡು ಭಾಷೆಗಳಲ್ಲೂ ಕೃತಿ ರಚಿಸಿರುವರು. ಜಲಪಾತ, ಕರುಣಾ ಶ್ರಾವಣ, ಮಾನಸ ಸರೋವರ, ಮೊದಲು ಮಾನವನಾಗು ಅವರ ಕವನಸಂಕಲನಗಳು. ತುಷಾರ ಹಾರ ಕಿರುಗತೆಗಳು, ಕಲ್ಲೋಲ ಮಾಲೆ ಎಂಬ ಅನುಭಾವ ಗೀತಗಳನ್ನು ರಚಿಸಿದ್ದಾರೆ. ಮಕ್ಕಳ ಸಾಹಿತ್ಯಕ್ಕೂ ಇವರ ಕೊಡುಗೆ ಅಪಾರ. ಅನೇಕ ಸಂಪಾದಿತ ಕೃತಿಗಳನ್ನು ಪ್ರಕಟಿಸಿದ್ದಾರೆ. ಶರಣರ ಸಾಹಿತ್ಯದಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದ್ದ ಬಸವಣ್ಣನವರ ಬದುಕನ್ನೂ ಆಧರಿಸಿದ ನಾಟಕ ಆತ್ಮಾರ್ಪಣ, ಸ್ವತಂತ್ರ ವೀರಸಿದ್ದೇಶ್ವರನ ಅಂಕಿತದಲ್ಲಿ ವಚನೋದ್ಯಾನ, ವಚನನಂದನ, ಶರಣ ಚರಿತಾಮೃತ, ಸಿದ್ಧರಾಮ ಮುಂತಾದ ಕೃತಿಗಳನ್ನೂ ರಚಿಸಿದರು. ಬಸವ ಜರ್ನಲ್ ಪತ್ರಿಕೆಯ ಸಂಪಾದಕರಾಗಿ ಅಲ್ಲಮನ ವಚನಗಳನ್ನು ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ. ಪುರಾಣಿಕರಿಗೆ ಕಲಬುರ್ಗಿಯಲ್ಲಿ ನಡೆದ ೫೮ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಗೌರವ, ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಭಾರತೀಯ ಭಾಷಾ ಪರಿಷತ್ತು-ಕೋಲ್ಕತ್ತಾದಿಂದ ಬಿಲ್ವಾರ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಸ.ಸ.ಮಾಳವಾಡ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿಗಳು ಇವರನ್ನು ಅರಸಿಬಂದವು. ಅಧಿಕಾರದಲ್ಲಿದ್ದಾಗಲೇ ಗೋಕಾಕ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದುದು ಇವರ ಮತ್ತೊಂದು ವಿಶೇಷತೆ. ಕನ್ನಡ ನಾಡು-ನುಡಿ-ಸಾಹಿತ್ಯಕ್ಕಾಗಿ ದುಡಿದ ಕಾವ್ಯಾನಂದರು ೧೯೯೪ ರ ಸೆಪ್ಟಂಬರ್ ೫ ರಂದು ನಿಧನರಾದರು.

# ಶ್ರೀ ಮಿರ್ಜಿ ಅಣ್ಣಾರಾಯ

ಪ್ರಸಿದ್ಧ ಸಾಹಿತಿಗಳು, ಸಮಾಜ ಸುಧಾರಕರೂ ಆದ ಮಿರ್ಜಿ ಅಣ್ಣಾರಾಯರು ಹುಟ್ಟಿದ್ದು ೧೯೧೮ರ ಆಗಸ್ಟ್ ೨೫ ರಂದು ಬೆಳಗಾವಿ ಜಿಲ್ಲೆಯ ಶೇಡಬಾಳದಲ್ಲಿ. ಪ್ರಾರಂಭಿಕ ಶಿಕ್ಷಣ ಹುಟ್ಟಿದೂರಿನಲ್ಲಿ. ನಂತರ ಕನ್ನಡ ಸಾಹಿತ್ಯ ಪರಿಷತ್ತಿನ 'ಜಾಣ' ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಶೇಡಬಾಳ ಸಮೀಪದ ಉಗಾರದಲ್ಲಿ ಶಾಲಾ ಶಿಕ್ಷಕರಾಗಿ ವೃತ್ತಿಜೀವನ ಪ್ರಾರಂಭಿಸಿದರು. ಅಧ್ಯಾಪನದ ಜೊತೆಗೆ ಅಧ್ಯಯನವನ್ನು ಮುಂದುವರಿಸಿ, ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಗೊಂಡು ಧಾರವಾಡದ ಶಿಕ್ಷಕರ ತರಬೇತಿ ಕಾಲೇಜಿನಿಂದ ಶಿಕ್ಷಣ ತರಬೇತಿ ಪಡೆದುಕೊಂಡರು. ಕನ್ನಡ ಭಾಷೆಯ ಜೊತೆಗೆ ಮರಾಠಿ, ಹಿಂದಿ, ಇಂಗ್ಲಿಷ್, ಗುಜರಾತಿ ಭಾಷೆಗಳಲ್ಲಿ ಪ್ರಭುತ್ವ ಗಳಿಸಿಕೊಂಡ ಅಣ್ಣಾರಾಯರು ಪ್ರಸಿದ್ಧ ವಿದ್ವಾಂಸರಾದ ಆ.ನೇ. ಉಪಾಧ್ಯಾಯರ ಮಾರ್ಗದರ್ಶನದಲ್ಲಿ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳನ್ನು ಕಲಿತರು. ಕನ್ನಡ ಸಾಹಿತ್ಯದ ಓದಿನಿಂದ ಆಕರ್ಷಿತರಾಗಿ ಬರವಣಿಗೆ ಪ್ರಾರಂಭಿಸಿದ ಶ್ರೀಯುತರು ಸನ್ಮತಿ, ವಿವೇಕಾಭ್ಯುದಯ, ಗುರುದೇವ, ಪ್ರಬುದ್ಧ ಕರ್ನಾಟಕ, ಜೀವನ-ಮುಂತಾದ ನಿಯತಕಾಲಿಕೆಗಳಿಗೆ ಲೇಖನಗಳನ್ನು ಬರೆದರು. ನಿಸರ್ಗ, ರಾಷ್ಟ್ರಪುರುಷ, ರಾಮಣ್ಣ ಮಾಸ್ತರ, ಶ್ರೇಯಾಂಸ, ಪ್ರತಿ ಸರಕಾರ, ಅಶೋಕ ಚಕ್ರ, ಎರಡು ಹೆಜ್ಜೆ, ಹದಗೆಟ್ಟಹಳ್ಳಿ, ಸಾಮ್ರಾಟ್ ಶ್ರೇಣಿಕ, ಚಾವುಂಡರಾಯ, ಋಷಭದೇವ ಇವರ ಕಾದಂಬರಿಗಳು. ಪ್ರಣಯ ಸಮಾ, ಅಮರ ಕಥೆಗಳು, ವಿಜಯಶ್ರೀ. ಕಥಾಸಂಕಲನಗಳು, ಭಾಷಾ ಶಿಕ್ಷಣ, ಲೇಖನ ಕಲೆ, ಮೂಲ ಶಿಕ್ಷಣದ ಮೌಲ್ಯಮಾಪನ ಶೈಕ್ಷಣಿಕ ಗ್ರಂಥಗಳು, ದತ್ತವಾಣಿ, ವಿಮರ್ಶೆಯ ಸ್ವರೂಪ, ಭರತೇಶನ ನಾಲ್ಕು ಚಿತ್ರಗಳು, ಕನ್ನಡ ಸಾಹಿತ್ಯದ ಒಲವುಗಳು ಇವು ವಿಮರ್ಶಾ ಕೃತಿಗಳು, ಕಲ್ಯಾಣ ಕೀರ್ತಿಯ ಚಿನ್ಮಯ, ಚಿಂತಾಮಣಿ, ಭರತೇಶ ವೈಭವದ ಶೋಭನ ಸಂಗಳು-ಸಂಪಾದಿತ ಕೃತಿಗಳು, ಪ್ರಿಯದರ್ಶಿ, ಭಾರತದ ಬೆಳಕು, ಖಾರವೇಲ, ಭಗವಾನ್ ಮಹಾವೀರ, ಬುದ್ಧನ ಕಥೆ, ಮಹಮದ್ ಪೈಗಂಬರ್, ಶ್ರೀ ಶಾಂತಿಸಾಗರರು, ತೀರ್ಥಂಕರ ಮಹಾವೀರ, ಮಹಾಪುರುಷ ಸೇರಿ ಸುಮಾರು ೩೦ಕ್ಕೂ ಹೆಚ್ಚು ಜೀವನ ಚರಿತ್ರೆ ಕೃತಿಗಳು ಪ್ರಕಟಿತಗೊಂಡಿವೆ. "ಜೈನಧರ್ಮ" ಎಂಬ ಬೃಹತ್ ಗ್ರಂಥ ಅವರ ವಿದ್ವತ್ತಿಗೆ ಸಾಕ್ಷಿಯಾದ ಕೃತಿ. ಹಲವಾರು ಸಂಘ ಸಂಸ್ಥೆಗಳೊಡನೆ ಒಡನಾಟವಿರಿಸಿಕೊಂಡಿದ್ದ ಅಣ್ಣಾರಾಯರು ಶೇಡಬಾಳದಲ್ಲಿ 'ಶಾಂತಿ ಸೇವಾ ಸದನ' ತೆರೆದು ಯುವ ಬರಹಗಾರರ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರ ಸಾಹಿತ್ಯ ಸೇವೆಗೆ ನಿಸರ್ಗ ಕಾದಂಬರಿಗೆ ದೇವರಾಜ ಬಹದ್ದೂರ್ ಪ್ರಶಸ್ತಿ, ರಾಜ್ಯ ಸರಕಾರದ ಆದರ್ಶ ಶಿಕ್ಷಕ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿಗಳು ಲಭಿಸಿವೆ. ೧೯೭೫ರ ಡಿಸೆಂಬರ್ ೨೩. ರಂದು ಶ್ರೀ ಮಿರ್ಜಿ ಅಣ್ಣಾರಾಯರು ನಿಧನರಾದರು.

# ಡಾ. ರಾ.ಯ. ಧಾರವಾಡಕರ

ಡಾ. ರಾ.ಯ. ಧಾರವಾಡಕರರು ಹುಟ್ಟಿದ್ದು ೧೯೧೯ರ ಜುಲೈ ೧೭ರಂದು ವಿಜಾಪುರ ಜಿಲ್ಲೆಯ ಬಾಗಲಕೋಟೆಯಲ್ಲಿ. ಭಾಷಾಶಾಸ್ತ್ರ, ಪತ್ರಿಕೋದ್ಯಮ, ಅರ್ಥಶಾಸ್ತ್ರ, ರಾಜಕಾರಣ, ಸಾಹಿತ್ಯ - ಹೀಗೆ ಅನೇಕ ವಿಷಯಗಳಲ್ಲಿ ಅವರು ವಿದ್ವತ್ತು ಗಳಿಸಿದರು. ಪ್ರಾಥಮಿಕ ಶಿಕ್ಷಣವನ್ನು ಬಾಗಲಕೋಟೆಯ ಶಾಲೆಯಲ್ಲೂ, ಮಾಧ್ಯಮಿಕ ಶಿಕ್ಷಣವನ್ನು ಮ್ಯುನ್ಸಿಪಲ್ ಆಂಗ್ಲೋ ವರ್ನಾಕ್ಯುಲರ್ ಶಾಲೆ ಮತ್ತು ಬಸವೇಶ್ವರ ಪ್ರೌಢಶಾಲೆಗಳಲ್ಲಿ ಪಡೆದುಕೊಂಡರು. ೧೯೩೭ರಲ್ಲಿ ಮುಂಬಯಿಯ ವಿಶ್ವವಿದ್ಯಾಲಯದ ಮೆಟ್ರಿಕ್ಯುಲೇಷನ ಪರೀಕ್ಷೆಯಲ್ಲಿ ತೇರ್ಗಡೆಯಾದ ನಂತರ ಸಾಂಗ್ಲಿಯ ವೆಲ್ಲಿಂಗ್ಟನ್ ಕಾಲೇಜಿನಿಂದ ಪ್ರಥಮ ವರ್ಗದಲ್ಲಿ ಬಿ.ಎ. ಆನರ್ಸ್ (ಕನ್ನಡ) ಪದವಿ ಪಡೆದರು. ೧೯೪೩ ರಲ್ಲಿ ಇಂಗ್ಲಿಷ್ ಐಚ್ಛಿಕ ವಿಷಯದಲ್ಲಿ ಎಂ.ಎ. ಪದವಿ. ಗಳಿಸಿದ ಧಾರವಾಡಕರರು ಉತ್ತಮ ಅಂಕಗಳಿಸಿದ್ದರಿಂದ ಅದೇ ಕಾಲೇಜಿನ ಫೆಲೊ ಆಗಿ ಆಯ್ಕೆಯಾಗಿ ಇಂಗ್ಲಿಷ್ ಟ್ಯೂಟರ್ ಆಗಿಯೂ ಕೆಲಸಮಾಡಿದರು. ನಂತರ ಮುಂಬಯಿಯ ಸೆಕ್ರಟರಿಯೆಟ್‌ನಲ್ಲಿ ರೇಷನಿಂಗ್ ಅಧಿಕಾರಿಯಾಗಿ ನೇಮಕಗೊಂಡರು. ಮುಂದೆ ೧೯೪೪ ರಲ್ಲಿ ಧಾರವಾಡದ ಕೆ.ಇ. ಬೋರ್ಡ್ ಕಾಲೇಜಿನಲ್ಲಿ (ಇಂದಿನ ಜೆ.ಎಸ್.ಎಸ್. ಕಾಲೇಜು) ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ನೇಮಕಗೊಂಡರು. ಪ್ರಿನ್ಸಿಪಾಲರಾಗಿಯೂ ಸುಮಾರು ಕಾಲು ಶತಮಾನಗಳ ಕಾಲ ಕಾರ್ಯನಿರ್ವಹಿಸಿದರು. ೧೯೬೪ರಲ್ಲಿ ಫುಲ್‌ಬ್ರೈಟ್ ಸ್ಕಾಲರ್‌ಶಿಪ್ ಪಡೆದು ಅಮೇರಿಕಾವನ್ನು ಸಂದರ್ಶಿಸಿ ಬಂದ ಧಾರವಾಡಕರರು ಕೊನೆಯವರೆಗೂ ನಾಡು-ನುಡಿಗಾಗಿ ಅಪಾರವಾಗಿ ಶ್ರಮಿಸಿದರು. 'ಹೊಸಗನ್ನಡ ಉದಯಕಾಲ' ಪ್ರೌಢಪ್ರಬಂಧಕ್ಕೆ ಪಿಎಚ್.ಡಿ. ಪದವಿ ದೊರೆಯಿತು. ಇವರ 'ಕನ್ನಡ ಭಾಷಾ ಶಾಸ್ತ್ರವು' ಕನ್ನಡ ಭಾಷೆಯ ಉಗಮ, ವಿಕಾಸ, ವ್ಯಾಕರಣ ವಿಚಾರ, ಭಾಷೆಯ ವೈಶಿಷ್ಟ್ಯಗಳನ್ನೂ ಸೊಗಸಾಗಿ ನಿರೂಪಿಸಿರುವ ಗ್ರಂಥವೆನಿಸಿದೆ. ಮೂವತ್ತಕ್ಕೂ ಹೆಚ್ಚು ಕೃತಿಗಳನ್ನೂ ಸಂಪಾದಿಸಿದ್ದಾರೆ. ಪ್ರಬಂಧ ಸಾಹಿತ್ಯವನ್ನೂ ಬೆಳೆಸಿದವರಲ್ಲಿ ಧಾರವಾಡಕರರ ಹೆಸರು ಮುಂಚೂಣಿಯಲ್ಲಿದೆ. ಇವರ ಧೂಮ್ರವಲಯಗಳು, ತೂರಿದ ಚಿಂತನೆಗಳು, ನವಿಲುಗರಿ ಮತ್ತು ಸೂರ್ಯಪಾನ ಮುಂತಾದ ಪ್ರಬಂಧ ಸಂಕಲನಗಳು ಪ್ರಕಟಗೊಂಡಿವೆ. ಕತೆಗಾರರಾಗಿಯೂ ಹೆಸರು ಗಳಿಸಿರುವ ಧಾರವಾಡಕರರು ಏಳು ಜನ ಆಫ್ರಿಕನ್ ಕತೆಗಾರರ ಕತೆಗಳನ್ನಾರಿಸಿಕೊಂಡು ಕನ್ನಡಕ್ಕೆ ರೂಪಾಂತರಿಸಿ 'ತೆರೆಯ ಹಿಂದೆ' - ಅಮೇರಿಕನ ನೀಗ್ರೋ ಕಥೆಗಳು ಮತ್ತು ನಾಗರೋತ್ತರ ಕಥೆಗಳು ಎಂಬ ಹೊಸ ಮಾದರಿಯ ಕತೆಗಳನ್ನು ಓದುಗರಿಗೆ ನೀಡಿದ್ದಾರೆ. ಇವರ ಅಮೇರಿಕಾ ಪ್ರವಾಸಾನುಭವವನ್ನೂ ನಿರೂಪಿಸುವ ಕೃತಿ 'ನಾ ಕಂಡ ಅಮೇರಿಕೆ'ಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ದೊರೆತಿದೆ. ಇದಲ್ಲದೆ ವೆಂಕಟ ರಂಗೋಕಟ್ಟಿ, ಶ್ರೀ ನಮನ, ಡಾ. ನಂದಿಮಠರ ನೆನಪು, ರೊದ್ದ ಶ್ರೀನಿವಾಸರಾಯರು, ಕಾವ್ಯಾನಂದ, ಪುಣೇಕರ ಮುಂತಾದ ವ್ಯಕ್ತಿಪರಿಚಯದ ಕೃತಿಗಳನ್ನು ರಚಿಸಿದ್ದಾರೆ. ಸಾರಸ್ವತ ಲೋಕದಲ್ಲಿ ವಿಶಿಷ್ಟ ರೀತಿಯಲ್ಲಿ ದುಡಿದ ರಾ.ಯ.ಧಾರವಾಡಕರವರಿಗೆ ಮೈಸೂರು ಸರ್ಕಾರದಿಂದ ಸಾರ್ವಜನಿಕ ಸೇವಾ ಪ್ರಶಸ್ತಿ, ಮೂರು ಸಾವಿರ ಮಠದ ಪುರಸ್ಕಾರ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ದೊರೆತಿವೆ. ಕನ್ನಡ ಸಾರಸ್ವತ ಲೋಕದಲ್ಲಿ 'ರಾಯ'ರೆಂದೇ ಪ್ರಸಿದ್ಧರಾಗಿದ್ದ ಧಾರವಾಡಕರರು ೧೯೯೧ ರ ಏಪ್ರಿಲ್ ೧೩ರಂದು ನಿಧನರಾದರು.

ಕನ್ನಡ ನಾಡು-ನುಡಿಗೆ ಅಪಾರವಾದ ಸೇವೆಯನ್ನು ಸಲ್ಲಿಸಿದ ಈ ಮೂವರು ಅಗ್ರಗಣ್ಯ ವಿದ್ವಾಂಸರ ಜನ್ಮಶತಮಾನೋತ್ಸವವನ್ನು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ನವದೆಹಲಿಯ ಕೇಂದ್ರ ಸಾಹಿತ್ಯ ಅಕಾಡೆಮಿ ಆಯೋಜಿಸುವುದರ ಮೂಲಕ ಗೌರವ ನಮನವನ್ನು ಸಲ್ಲಿಸುತ್ತಿವೆ.

೩೧ ಜುಲೈ ೨೦೧೮ ಬುಧವಾರ ಬೆಳಗ್ಗೆ ೧೧.೦೦ ಕ್ಕೆ

# ಉದ್ಘಾಟನಾ ಸಮಾರಂಭ

ಉದ್ಘಾಟನೆ

**ಡಾ. ಚಂದ್ರಶೇಖರ ಕಂಬಾರ**

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು

ಅಧ್ಯಕ್ಷರು, ಕೇಂದ್ರ ಸಾಹಿತ್ಯ ಅಕಾಡೆಮಿ

ಆಶಯನುಡಿ

**ಡಾ. ಸಿದ್ಧಲಿಂಗಯ್ಯ**

ಹಿರಿಯ ಕವಿಗಳು

ಸಂಚಾಲಕರು, ಕೇಂದ್ರ ಸಾಹಿತ್ಯ ಅಕಾಡೆಮಿ

ಅಧ್ಯಕ್ಷತೆ

**ಡಾ. ಮನು ಬಳಿಗಾರ್**

ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

---

**ಗೋಷ್ಠಿ – ೧** ಮಧ್ಯಾಹ್ನ ೨.೦೦ ರಿಂದ ೩.೩೦ರ ವರೆಗೆ

---

## ಡಾ. ಸಿದ್ದಯ್ಯ ಪುರಾಣಿಕ ಬದುಕು–ಬರಹ

ಅಧ್ಯಕ್ಷತೆ : **ಡಾ. ನಾಗಾಬಾಯಿ ಬುಳ್ಳಾ**
ವಿಷಯ : ಬದುಕು

ವಿಷಯ ಮಂಡನೆ : **ಡಾ. ವೆಂಕಟಗಿರಿ ದಳವಾಯಿ**
ವಿಷಯ : ಕಾವ್ಯ

**ಡಾ. ವೈ.ಎಂ. ಯಾಕೊಳ್ಳಿ**
ವಿಷಯ : ಗದ್ಯ ಸಾಹಿತ್ಯ

---

**ಗೋಷ್ಠಿ – ೨** ಮಧ್ಯಾಹ್ನ ೩.೪೫ ರಿಂದ ೫.೧೫

---

## ಮಿರ್ಜಿ ಅಣ್ಣಾರಾಯ ಬದುಕು–ಬರಹ

ಅಧ್ಯಕ್ಷತೆ : **ಡಾ. ಶಾಂತಿನಾಥ ದಿಬ್ಬದ**
ವಿಷಯ : ಬದುಕು

ವಿಷಯ ಮಂಡನೆ : **ಡಾ. ಬಾಳಾಸಾಹೇಬ ಲೋಕಾಪುರ**
ವಿಷಯ : ಕಾದಂಬರಿಗಳು

**ಡಾ. ಪದ್ಮಿನಿ ನಾಗರಾಜ**
ವಿಷಯ : ಸಂಶೋಧನೆ

ಗೋಷ್ಠಿ - ೩ ೧೧-೦೮-೨೦೧೯ ಗುರುವಾರ ಬೆಳಗ್ಗೆ ೧೦.೩೦ ರಿಂದ ೧೨.೦೦

## ಡಾ. ರಾ.ಯ. ಧಾರವಾಡಕರ ಬದುಕು-ಬರಹ

ಅಧ್ಯಕ್ಷತೆ : **ಡಾ. ಜಿ.ಎಂ. ಹೆಗಡೆ**
ವಿಷಯ : ಬದುಕು

ವಿಷಯ ಮಂಡನೆ : **ಪ್ರೊ. ಜಿ. ಸುಕನ್ಯಾ**
ವಿಷಯ : ಸೃಜನ ಸಾಹಿತ್ಯ

**ಡಾ. ಗಣೇಶ ಅಮೀನಗಡ**
ವಿಷಯ : ಸೃಜನೇತರ ಸಾಹಿತ್ಯ

---

## ಕವಿಗೋಷ್ಠಿ

ಮಧ್ಯಾಹ್ನ ೧೨.೦೦ ರಿಂದ ೧.೩೦

ಅಧ್ಯಕ್ಷತೆ

**ಡಾ. ಮಲ್ಲಿಕಾ ಘಂಟಿ**
ಹಿರಿಯ ಕವಿಗಳು, ವಿಶೇಷಾಧಿಕಾರಿಗಳು
ಕರ್ನಾಟಕ ಲಲಿತಾಕಲಾ ವಿಶ್ವವಿದ್ಯಾಲಯ, ಬಾದಾಮಿ

ಭಾಗವಹಿಸುವವರು

ಶ್ರೀ ಸುಬ್ಬು ಹೊಲೆಯಾರ್
ಶ್ರೀಮತಿ ಸಾವಿತ್ರಿ ಹಿರೇಮಠ
ಶ್ರೀ ಮುದಲ್ ವಿಜಯ್
ಶ್ರೀ ಶಿವರಾಜ ಬ್ಯಾಡರಹಳ್ಳಿ
ಶ್ರೀಮತಿ ಸೌಮ್ಯ ಕೆ.ಆರ್.
ಕು॥ ಮಂಜುಳಾ ಗೋನಾಳ
ಶ್ರೀ ರವಿ ಕೊಟಾರಗಸ್ತಿ
ಶ್ರೀ ಚಿದಾನಂದ ಸಾಲಿ
ಡಾ. ಪ್ರಜ್ಞಾ ಮತ್ತಿಹಳ್ಳಿ
ಶ್ರೀಮತಿ ಕಾತ್ಯಾಯಿನಿ ಕುಂಜಿಬೆಟ್ಟು
ಶ್ರೀ ಚಂದ್ರಶೇಖರ ವಸ್ತ್ರದ
ಶ್ರೀಮತಿ ಲಲಿತಾ ಸಿದ್ಧಬಸವಯ್ಯ
ಶ್ರೀಮತಿ ಶಾರದಾ ಮುಳ್ಳೂರ
ಶ್ರೀ ಎನ್. ರವಿಕುಮಾರ್ (ಶಿವಮೊಗ್ಗ)